Amount advanced to the Taluk Agricultural Marketing Co-operative Society, Ltd., Channapatna for the purchase of paddy.

*Q.—646. Sri B. J. LINGE GOWDA (Channapatna).—

Will the Government be pleased to state :—

the amount advanced to the Taluk Agriculture Produce Marketing Co-operative Society, Ltd., Channapatna, for the purchase of paddy during the current year ?

A.—Sri RAMAKRISHNA HEGDE (Minister for Co-operation and Development).—

Share capital contribution	...	Rs. 15,000.
Cash Credit Loan	...	Rs. 3,00,000.

ಶ್ರೀ ಬಿ. ಜೆ. ಲಿಂಗೇಗೌಡ.—ಸರಕಾರದವರು ಯಾವ ಉದ್ದೇಶಕ್ಕಾಗಿ ಷೇರ್ ಕ್ಯಾಪಿಟಲ್ ಕಾಂಟ್ರಿಬ್ಯೂಷನ್ ಮತ್ತು ಕ್ಯಾಷ್‌ಕ್ರೆಡಿಟ್ ಲೋನ್ ಒದಗಿಸಿ ಕೊಡುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಷೇರ್ ಬಂಡವಾಳ ಕೊಡುವ ಉದ್ದೇಶ ಸಹಕಾರಿ ಸಂಘಗಳನ್ನು ಹೆಚ್ಚು ಮಾಡುವುದಕ್ಕೆ. ಕ್ಯಾಷ್‌ಕ್ರೆಡಿಟ್ ಲೋನ್ಸ್ ಬೇರೆ ಕಾರಣಕ್ಕೆ ಕೊಡುತ್ತೇವೆ. ಮುಖ್ಯವಾಗಿ ರೈತರು ಬತ್ತ ಕೊಂಡುಕೊಳ್ಳಲಿಕ್ಕೆ ಕೊಡುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಷೇರ್ ಬಂಡವಾಳ ಕೊಟ್ಟಿರುವುದು ಯಾವ ವರ್ಷದಲ್ಲಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದೇ ವರ್ಷ ಎಂದರೆ 1962-63 ರಲ್ಲಿ.

ಶ್ರೀ ಬಿ. ಜೆ. ಲಿಂಗೇಗೌಡ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಕಳೆದ ವರ್ಷ ಎರಡನೇ ಸಲ ಫಸಲು ರೈತರು ತೆಗೆದುಕೊಂಡಿದ್ದಾರೆ ಎಂಬುದು ಸರಕಾರಕ್ಕೆ ಗೊತ್ತಿನೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆ ಸಲ ಬೆಳೆ ತೆಗೆದುಕೊಂಡಿದ್ದಾರೆ ಎಂದು ಸರಕಾರಕ್ಕೆ ಗೊತ್ತಿಲ್ಲ. ಚನ್ನಪಟ್ಟಣದಲ್ಲಿ ಆ ರೀತಿ ಬೆಳೆಯುತ್ತಾರೆಂದು ಗೊತ್ತಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಅವರು ಉತ್ತರ ಹೇಳಿದ್ದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಸರ್ಕಾರದವರಿಗೆ ಗೊತ್ತಿಲ್ಲ ಎಂದು ಹೇಳಿದರು.

ಶ್ರೀ ಬಿ. ಜೆ. ಲಿಂಗೇಗೌಡ.—ಚನ್ನಪಟ್ಟಣ ತಾಲ್ಲೂಕಿನ ವ್ಯವಸಾಯ ಸಹಕಾರ ಸಂಘದವರು, ರೈತರು ಬೆಳೆದ ಎರಡನೇ ಫಸಲನ್ನು ಇದುವರೆಗೂ ಕೊಂಡುಕೊಂಡಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ. ಒಟ್ಟು 10 ಸಾವಿರ ಚೀಲ ಬತ್ತವನ್ನು ಸೊಸೈಟಿಯವರು ಇಲ್ಲಿಯವರೆಗೂ ಕೊಂಡುಕೊಂಡಿದ್ದಾರೆ.

ಶ್ರೀ ಬಿ. ಜೆ. ರಾಮೇಗೌಡ.—ಈ ತಾಲ್ಲೂಕಿನಲ್ಲಿ 15 ಸಾವಿರ ರೂಪಾಯಿ ಕೊಟ್ಟಿರುವುದು ಏತಕ್ಕಾಗಿ ?

ಶ್ರೀ ರಾಮಕೃಷ್ಣ ಹೆಗಡೆ.—15 ಸಾವಿರ ರೂಪಾಯಿ ಕೊಟ್ಟಿರುವುದು ಷೇರ್ ಕ್ಯಾಪಿಟಲ್. ಕ್ಯಾಷ್ ಕ್ರೆಡಿಟ್ ಲೋನು 3 ಲಕ್ಷದ 80 ಸಾವಿರ ರೂಪಾಯಿಗಳನ್ನು ಈಗಾಗಲೇ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಸಹಕಾರ ಸಂಘದವರು ಬತ್ತವನ್ನು ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೊಂಡುಕೊಳ್ಳದೇ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೊಂಡುಕೊಳ್ಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಬಂದಿದೆ. ಕೆಲವು ಬತ್ತವನ್ನು ಮೈಸೂರಿನಲ್ಲಿ ಖರೀದಿ ಮಾಡಿದ್ದಾರೆ; ಅದರ ಬಗ್ಗೆ ನೂಕ್ತ ಸಲಹೆ ಕೊಟ್ಟಿದ್ದೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಕೇವಲ 15 ಸಾವಿರ ರೂಪಾಯಿ ಷೇರು ಬಂಡವಾಳವಿರತಕ್ಕ ಈ ಸಹಕಾರ ಸಂಘಕ್ಕೆ ಯಾವ ನಿರ್ದಿಷ್ಟವಾದ ತತ್ವ ಅಥವಾ ಭದ್ರತೆಯನ್ನೂ ಕೂಡ ನೋಡದೆ ಕ್ಯಾಷ್ ಅಂಡ್ ಕ್ರೆಡಿಟ್ ಲೋನು 3 ಲಕ್ಷ ಚಿಲ್ಲರೆ ಹಾಗೂ ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಲಕ್ಷಗಟ್ಟಲೆ ಸಾಲದ ಸೌಲಭ್ಯ ಕೊಟ್ಟಿದ್ದೀರಿ. ಹೀಗಿರುವಾಗ ಸರ್ಕಾರದ ಹಣವನ್ನು ಯಾವ ರೀತಿ ಭದ್ರತೆ ಪಡಿಸಿದ್ದೀರಿ ಮತ್ತು ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಅವಶ್ಯಕವಾದ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದು ಕೊಂಡೇ ಸರ್ಕಾರದ ಹಣ ಕೊಡಲಿಕ್ಕೆ ಅನುಮತಿಯನ್ನು ಕೊಡುತ್ತಾರೆ.

ಶ್ರೀ ಜಿ. ಮಾದೇಗೌಡ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಪರ್ಸೆಂಟ್ ಬತ್ತವನ್ನು ಸ್ಟಾಕ್ ಮಾಡಿದ್ದಾರೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಆಗಲೇ ಹೇಳಿದೆ, 10 ಸಾವಿರ ಚೀಲ ಖರೀದಿ ಮಾಡಿದ್ದಾರೆ ಎಂದು.

ಶ್ರೀ ಜಿ. ರಾಮೇಗೌಡ.—15 ಸಾವಿರ ರೂಪಾಯಿಗಳಲ್ಲದೆ ಮತ್ತೆ 90 ಸಾವಿರ ರೂಪಾಯಿ ಗಳಷ್ಟು ಹಣವನ್ನು ಷೇರ್ ಕ್ಯಾಪಿಟಲ್ ಆಗಿ ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—15 ಸಾವಿರ ರೂಪಾಯಿಗಳನ್ನು ಈ ಸ್ಕೀಮಿಗನುಸಾರವಾಗಿ ಕೊಟ್ಟಿದ್ದೇವೆ. 90 ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ಬೇರೆ ಕೆಲಸಕ್ಕೆ.

ಶ್ರೀ ವಿ. ಎಂ ದೇವ್.—15 ಸಾವಿರ ರೂಪಾಯಿ ಬಂಡವಾಳವಿರುವಾಗ, ಸರ್ಕಾರದಿಂದ ಎಷ್ಟು ಪ್ರಮಾಣದಲ್ಲಿ ನೆರವು ಬರಬೇಕೆಂದು ಕಾನೂನಿನಲ್ಲಿ ಅವಕಾಶವಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಕಟ್ಟುನಿಟ್ಟಾದ ಕಾನೂನು ಇಲ್ಲ. ಅವರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲದೇ ಇದ್ದರೆ ಸಹಕಾರಿ ಸಂಘವು ಕೆಲಸ ಚೆನ್ನಾಗಿ ನಡೆಯುವುದಿಲ್ಲ. ಅದು ಚೆನ್ನಾಗಿ ನಡೆಯಬೇಕೆಂದು ಷೇರ್ ಬಂಡವಾಳ ಕೊಡಬೇಕಾಗಿ ಬರುತ್ತದೆ, ಕೂಡ ತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—15 ಸಾವಿರ ಷೇರು ಬಂಡವಾಳ ನೀವು ಕೊಟ್ಟಿದ್ದೀರಿ ಅದರ ಜೊತೆಗೆ ಅವರು ಏನಾದರೂ ಹಾಕಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಪ್ರತ್ಯೇಕವಾಗಿ ಕೂಡಿಸುವಂತಹ ಅಗತ್ಯ ಇಲ್ಲ. ಆದರೂ ಆ ಸೊಸೈಟಿಯ ಮ್ಯಾನೇಜ್‌ಮೆಂಟ್ ಕಮಿಟಿಯವರಿಗೆ ಸ್ವಂತ ಷೇರ್ ಬಂಡವಾಳವನ್ನು ಹೆಚ್ಚಿಸಿಕೊಳ್ಳ ಬೇಕೆಂದು ಹೇಳಿದ್ದೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಹಾಲಿ ಆಡಳಿತವರ್ಗದ ಮೇಲೆ ಹಣದ ದುರುಪಯೋಗ ಮತ್ತು ಇತರ ದೂರುಗಳು ಪದೇ ಪದೇ ಸರ್ಕಾರದವರ ಗಮನಕ್ಕೆ ಬರುತ್ತಾ ಇಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಅಂತಹ ದೂರುಗಳು ಬಂದಿವೆ.

ಶ್ರೀ ಜಿ. ರಾಮೇಗೌಡ.—ರಾಜ್ಯದಲ್ಲಿ ಯಾವ ಸೊಸೈಟಿಗೂ ಕೊಡದೇ ಇರತಕ್ಕ ಸೌಲತ್ತು ಗಳನ್ನು ಈ ಸೊಸೈಟಿಗೆ ಸರ್ಕಾರದವರು ಕೊಡಲು ಇರತಕ್ಕ ಅಗಾಧವಾದ ಕಾರಣಗಳೇನು, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ರಾಜ್ಯದಲ್ಲಿ ಯಾವುದಕ್ಕೂ ಕೊಡದಂಥ ಸೌಲತ್ತು, ಸಹಾಯ ಕೊಟ್ಟಿದ್ದಾರೆ ಎಂದು ಹೇಳುವುದನ್ನು ಒಪ್ಪುವುದಿಲ್ಲ.

Sri M. Y. GHORPADE.—Is it not a fact that the Government gives the share capital to the Marketing Societies only on the condition that the Societies also subscribe an equal amount ?

Sri RAMAKRISHNA HEGDE.—Sir, it is not a new Society. It is the Taluk Agriculture Produce Marketing Co-operative Society. It was doing certain other activities, but, in addition to that, it was asked to take up this paddy purchase also. Therefore, under that scheme, the Government has subscribed to the extent of Rs. 15,000 towards the share capital.

ಶ್ರೀ ಬಿ. ಜೆ. ಲಿಂಗೇಗೌಡ.—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬತ್ತ ಕೊಂಡುಕೊಳ್ಳುವಾಗ ಹೆಚ್ಚಿನ ಬೆಲೆ ಕೊಟ್ಟು ಕೊಂಡುಕೊಂಡಿದ್ದಾರೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಹೆಚ್ಚಿನ ಬೆಲೆ, ಕಡಮೆ ಬೆಲೆ ಎಂದು ಗೊತ್ತಿಲ್ಲ. ಆದರೆ ಮೈಸೂರಿನಲ್ಲಿ ಖರೀದಿ ಮಾಡಿದ್ದಾರೆ ಎಂಬುದು ಗೊತ್ತಾಗಿದೆ. ಅದು ಅಷ್ಟು ಸಮಂಜಸವಲ್ಲ ಎಂದು ಆಗಲೇ ಹೇಳಿದ್ದೇವೆ ಎಂದು ತಿಳಿಸಿದೆ.

ಶ್ರೀ ವಿ. ಎಂ. ದೇವ್.—ಸಾರ್ವಜನಿಕರಿಂದ ಷೇರು ಬಂಡವಾಳ ಬಾರದೇ ಈ ತರಹ ಸೊಸೈಟಿಗಳು ಏರುವುದಕ್ಕೆ ಅವಕಾಶವಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಾರ್ವಜನಿಕರಿಂದ ಬಂಡವಾಳ ಬರಲಿಲ್ಲ ಎಂಬುದು ತಪ್ಪು ಗ್ರಹಿಕೆ. 15 ಸಾವಿರ ರೂಪಾಯಿ ಬಂಡವಾಳ ಇದೆ; ಸರ್ಕಾರದವರು ಕೊಟ್ಟಿದ್ದಾರೆ, ಅವರೂ ಸಹ ತಮ್ಮ ಭಾಗದ ಷೇರು ಬಂಡವಾಳವನ್ನು ಕೂಡಿಸಬೇಕೆಂದು ಹೇಳಿದ್ದೇವೆ ಅದಕ್ಕೆ ಅವರು ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಪ್ರತಿದಿನವೂ ಈ ಸಹಕಾರ ಸಂಘದ ವಿಷಯದಲ್ಲಿ ಪ್ರಶ್ನೆ ಬರುತ್ತಿರುವುದನ್ನು ನೋಡಿದರೆ ಇದರಲ್ಲಿ ಬಹಳಮಟ್ಟಿನ ಅನ್ಯಾಯ ನಡೆದಿದೆ ಎಂಬುದು ವ್ಯಕ್ತ ಪಡುತ್ತದೆ. ಹೀಗಿರುವಾಗ ಏನು ಅನ್ಯಾಯ ನಡೆದಿದೆ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಸ್. ನೂರ್ಯನಾರಾಯಣ ರಾವ್.—ಮೈಸೂರಿನಲ್ಲಿ ಬತ್ತ ಕೊಂಡುಕೊಳ್ಳುವಾಗ ಮಾರ್ಕೆಟ್ ಬೆಲೆ ತಾತ್ಕಾಲಿಕವಾಗಿ ಏರಿ ಹೋಗಿತ್ತು ಎಂಬುದು ಗೊತ್ತೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ವಿಚಾರ ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ವಾರದಲ್ಲಿ 5 ಸಾರಿ ಈ ಚನ್ನಪಟ್ಟಣ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಪ್ರಶ್ನೆ ಉದ್ಭವಿಸಿದೆ, ಹೀಗಿರುವಾಗ ಇದರಲ್ಲಿ ಏನಾದರೂ ಒಂದು ಅನ್ಯಾಯ ನಡೆದಿದೆಯೇ ಅಥವಾ ರಾಜಕೀಯ ನಡೆದಿದೆಯೇ? ಏನು ನಡೆದಿದೆ ಎಂಬುದನ್ನು ಈ ಸಭೆಗೆ ತಿಳಿಸುತ್ತೀರಾ, ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ.—ಆಗಲೇ ಹೇಳಿದೆ, ಈ ಸೊಸೈಟಿಗೆ ಸಂಬಂಧಪಟ್ಟ ವ್ಯವಹಾರ ಅದರ ವಿಚಾರದಲ್ಲಿ ಮಾಡಿರುವಂತಹ ಕೆಲವು ದೂರುಗಳು ಇವೆ ಎಂದು ಸರ್ಕಾರದವರ ಪರಿಶೀಲನೆಯಲ್ಲಿವೆ ಎಂದು. ಅದರ ಬಗ್ಗೆ ಅಂತಿಮವಾದ ತನಿಖೆ ನಡೆದು ನೂಕ್ತವಾದ ನಿರ್ಧಾರ ಕೈಕೊಳ್ಳುವುದಕ್ಕಿಂತ ಮೊದಲು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಹೇಳವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಇದೇ ರೀತಿ ಬತ್ತ ಕೊಂಡುಕೊಳ್ಳಲಿಕ್ಕೆ ಮತ್ತು ಷೇರ್ ಬಂಡವಾಳ ಅಲ್ಲದೇ ಸಾಲ ಕೊಡುವಂತಹ ಪಾಲಿಸಿ ಅಥವಾ ಸಹಾಯ ಬೇರೆ ಇತರ ಸಂಘಗಳಿಗೂ ಅನ್ವಯಿಸುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಿ ಬತ್ತದ ಫಸಲು ಬರುತ್ತದೆಯೋ, ಬತ್ತದ ಫಸಲು ತೆಗೆದು ಕೊಳ್ಳುತ್ತಾರೆಯೋ ಅಂತಹ ಎಲ್ಲಾ ಸಂಘಗಳಿಗೂ ಈ ಸಹಾಯವನ್ನು ಒದಗಿಸಲಾಗಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಹಣ ದುರುಪಯೋಗವಾಗಿದೆ ಎಂದು ವರದಿ ಬಂದಿದೆ ಎಂದು ತಿಳಿಸಿದಿರಿ, ವರದಿ ಯಾವಾಗ ಬಂತು ಮತ್ತು ಬಂದ ನಂತರ ಅವರಿಗೆ ಯಾವ ರೀತಿಯ ಸಹಾಯ ವನ್ನಾದರೂ ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಹಣ ದುರುಪಯೋಗವಾಗಿದೆ ಎಂದು ವರದಿ ಬಂದಿದೆ ಎಂದು ನಾನು ಹೇಳಲಿಲ್ಲ ; ಅದು ತಪ್ಪು ಗ್ರಹಿಕೆ. ಕೆಲವೊಂದು ದೂರುಗಳು ಬಂದಿವೆ. ಅವುಗಳಲ್ಲಿ ಎಷ್ಟು ಮಟ್ಟಿಗೆ ಸತ್ಯಾಂಶವಿದೆ ಅಥವಾ ಇಲ್ಲ ಎಂಬುದು ತನಿಖೆ ಮಾಡಿದ ನಂತರ ಗೊತ್ತಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.--ದೂರು ಬಂದ ಮೇರೆ ಈ ಸೊಸೈಟಿಗೆ ಏನಾದರೂ ಹಣ ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ದೂರ ಬಂದ ತಕ್ಷಣ ಎಲ್ಲಾ ಕಾರ್ಯಕ್ರಮಗಳನ್ನೂ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೆ ಸತ್ಯಾಂಶ ಇಲ್ಲ ಎಂದು ಮನವರಿಕೆಯಾಗುವುದಿಲ್ಲವೋ ಅಲ್ಲಿಯವರೆಗೂ ನಿಲ್ಲಿಸುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.-ಈ ಸಹಕಾರ ಸಂಘ ಒಂದಕ್ಕೇ ಎಷ್ಟು ಧನ ಸಹಾಯಮಾಡಿದ್ದೀರಾ? ಅಥವಾ ಸಂಸ್ಥಾನದಲ್ಲಿರತಕ್ಕ ಎಲ್ಲಾ ಸಹಕಾರ ಸಂಘಗಳಿಗೂ ಇದೇ ರೀತಿ ಸಹಾಯವನ್ನು ಕೊಟ್ಟಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಒಂದು ಎಕ್ಸೆಪ್ಷನ್ ಅಲ್ಲ ಮತ್ತು ಇದಕ್ಕೆ ಸ್ಪೆಷಲ್ ಫೇವರ್ ತೋರಿಸಿಲ್ಲ. ಸಾಮಾನ್ಯವಾಗಿ ಎಲ್ಲ ಬತ್ತ ಬೆಳೆಯುತ್ತಾರೆ ಬೆಲೆ ಕಡಮೆಯಾಗಿ ರೈತರಿಗೆ ತೊಂದರೆ ಯಾಗುತ್ತದೆಯೋ ಅಂತಹ ಸಂದರ್ಭದಲ್ಲಿ ಈ ಸಹಕಾರ ಸಂಘಗಳವರು ಆ ಬತ್ತವನ್ನು ಖರೀದಿ ಮಾಡಬಹುದು ಎಂಬ ಒಂದು ಸ್ಕೀಂ ತಯಾರು ಮಾಡಿದ್ದೇವೆ. ಅದರ ಪ್ರಕಾರ ಕೆಲಸ ಮಾಡುತ್ತಾ ಇದ್ದೇವೆ. ಅದರಂತೆ ಸಹಾಯ ಕೊಟ್ಟಿದ್ದಾರೆ.

ಶ್ರೀ ಜಿ. ರಾಮೇಗೌಡ.—ಈ ಸೊಸೈಟಿಯವರು ಬತ್ತಕ್ಕೆ ಕೊಟ್ಟಿರುವ 15 ಸಾವಿರ ರೂಪಾಯಿ ಗಳನ್ನು ಡ್ರಾ ಮಾಡಿ ಬತ್ತವನ್ನು ಕೊಳ್ಳಲಿಕ್ಕೆ ಉಪಯೋಗಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥದ್ದು ಗಮನಕ್ಕೆ ಬಂದಿಲ್ಲ, ಅವರು ಬತ್ತ ಖರೀದಿ ಮಾಡಿದ್ದಾರೆ, ಕಳೆದ ಮೂರು ನಾಲ್ಕು ತಿಂಗಳಿನಲ್ಲಿ ಎಂದರೆ ಮೇ, ಜೂನ್-ಜುಲೈನಲ್ಲಿ. ಮಾನ್ಯ ಸದಸ್ಯರು ಸಂಬಂಧಪಟ್ಟ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ ; ಅವರಿಗೆ ಈ ವಿಚಾರ ಗೊತ್ತಿರಬಹುದು.

ಶ್ರೀ ಸಂಜೀವನಾಥ ಐಕಳ.—ಈ ಸಹಕಾರ ಸಂಘಗಳು ಹುಲ್ಲು ಬೆಳೆಯುವ ಒಂದು ದೊಡ್ಡ ಮೈದಾನದಲ್ಲಿ ನೊಗ ಕಟ್ಟಿರುವ ಒಂಟಿ ಎತ್ತಿನಂತೆಯೇ? ಅಥವಾ ಜೋಡಿ ಎತ್ತಿನಂತಿವೆಯೇ? ಅಥವ ಬಿಳಿ ಬಣ್ಣದ ಎತ್ತುಗಳೇ? ಎಂದು ಕೇಳುತ್ತೇನೆ.

Mr. SPEAKER.—I disallow that question.

Sri SANJEEVANATHA IKAL.—The Hon'ble Minister told other day.

Mr. SPEAKER.—Whoever might say, I cannot allow this supplementary question.

ಶ್ರೀ ಎಸ್. ಎಂ. ಗುರೆಡ್ಡಿ.—ಈ ಸಹಕಾರ ಸಂಘಗಳಿಗೆ ಬತ್ತ ಖರೀದಿ ಮಾಡಲಿಕ್ಕೆ ತಾವೇನು ಸಹಾಯ ಮಾಡಿದ್ದೀರಿ. ಇದರಂತೆಯೇ ಜೋಳ ಎಲ್ಲ ಬೆಳೆಯುತ್ತದೆ. ಅಲ್ಲೂ ಕೂಡ ಅಲ್ಲಿರತಕ್ಕ ಸಹಕಾರಿ ಸಂಘಗಳಿಗೆ ಸಹಾಯ ಮಾಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥ ಪ್ರಶ್ನೆ ಇದುವರೆಗೂ ಸರ್ಕಾರದ ಮುಂದೆ ಬಂದಿಲ್ಲ; ಆದರೂ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

Granting of a Site for Gavathana to Ambewadi Village in Belgaum Taluk.

*Q.—706. Sri N. O. SAMAJI (Belgaum II).—

Will the Government be pleased to state :—

(*a*) whether they have received any representation from the residents of the Village Ambewadi in Belgaum Taluk for granting site for Gavathana and if so, when;

(*b*) whether they have deposited any amount with Goverment for the same, and if so, how much;

(*c*) whether the concerned Revenue Officers have visited the village to find out suitable site and if so, on what dates;

(*d*) whether the Divisional Commissioner has taken any decision in the matter and if so, whether the Government will place it on the table of the House;

(*e*) what steps Government have taken to grant the site for Gavathana ?

A.—Sri M. V. KRISHNAPPA (Minister for Revenue).—

(*a*) Yes, on 24-6-1949.

(*b*) Yes. The villagers have deposited an amount of Rupees 1',742-50 nP.

(*c*) The Assistant Commissioner has visited the site on 5-4-1957, in March 1958 and in September 1958, the Deputy Commissioner on 4th July 1960 and the Divisional Commissioner on 19th May 1962.

(*d*) The copy of the Order dated 20-6-1962 passed by the Divisional Commissioner is placed on the Table of the House [copy placed in Mysore Legislature Library *vide* No. 7 Legislative Assembly, September 1963].